# ಸಮಸ್ಯೆಗಳ ಸುಳಿಯಲ್ಲಿ ಮಹಿಳೆ ಮತ್ತು ಮಹಿಳಾ ಲೈಂಗಿಕ ದೌರ್ಜನ್ಯ

**ತಾರಾ ಬಿ.ಎಸ್.**

ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17013696

## ABSTRACT:

ಅನಾದಿ ಕಾಲದಿಂದಲೂ ಮಹಿಳೆಯರ ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಹೆಸರಿಗೆ ಮಾತ್ರ, ಅದು ಕೇವಲ ಕೆಲವೇ ಕ್ಷೇತ್ರಗಳಲ್ಲಿ ಕಾಣಬಹುದಾಗಿದೆ. ಇಂದು ಮಹಿಳೆ ಅಡುಗೆ ಮನೆಯಿಂದ ಅಂತರಿಕ್ಷದವರೆಗೂ ಹಾರಿರಬಹುದು. ಆದರೆ ಪರ್ವಗ್ರಹ ಪೀಡಿತರ ಮಧ್ಯೆ ಈಗಲೂ ಮಹಿಳಾ ಅತ್ಯಾಚಾರ, ಶೋಷಣೆಗಳು ನಿಂತಿಲ್ಲ. ವೇದಗಳ ಕಾಲದಲ್ಲೂ ಸ್ತ್ರೀಯರಿಗೆ ಉನ್ನತ ಸ್ಥಾನ ಇತ್ತು ಎಂದು ಕೇವಲ ಬೆರಳೆಣಿಕೆಯ ಉದಾಹರಣೆಗಳು ಸಿಗುತ್ತವೆ.

ಐತಿಹಾಸಿಕ ಕಾಲಘಟ್ಟಗಳಲ್ಲಿಯೂ ಸಾಧನೆ ಮಾಡಿದ ಮಹಿಳೆಯರಿಗೇನೂ ಕೊರತೆ ಇಲ್ಲ. ಅವರು ತಮಗೆ ಲಭ್ಯವಾದ ಅಲ್ಪ ಅವಕಾಶಗಳನ್ನು ಬಳಸಿ ಅಗಾಧ ಸಾಧನೆ ಮಾಡಿರುವುದು ಸತ್ಯ.

ಸತಿ ಪದ್ಧತಿ 1826ರಲ್ಲೂ ನಿಷೇಧಗೊಂಡಿದ್ದರೂ ಇನ್ನೂ ನಿಂತಿಲ್ಲ. ಹಾಗಾಗಿ ಮಹಿಳಾ ಸ್ಥಾನಮಾನಗಳಲ್ಲಿ ಇನ್ನೂ ಬದಲಾವಣೆಯ ಅವಶ್ಯಕತೆ ಇದೆ. ದಿನಬೆಳಗಾದರೆ ನಿತ್ಯ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗುವ ಸಾವಿರಾರು ಉದಾಹರಣೆಗಳು ಸಿಗುತ್ತವೆ. ಆದ್ದರಿಂದ ಮಹಿಳಾ ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ.

## KEYWORDS:

ಮಹಿಳೆ, ಅತ್ಯಾಚಾರ, ಸಂತಾನೋತ್ಪತ್ತಿ, ಸತಿ ಪದ್ಧತಿ, ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ.

**‘‘ಹೆಣ್ಣು ಎಂಬುದಾಗಿ ಜನಿಸುವುದಿಲ್ಲ, ಆದರೆ ನಂತರ ಅವಳನ್ನು ಹೆಣ್ಣಾಗಿ ರೂಪಿಸಲಾಗುತ್ತದೆ’’**

**ಸಿಮೊನ್ ಡಿ. ಬುವಾ (ಜರ್ಮನಿ ಸ್ತ್ರೀವಾದಿ)**

ಉಜ್ವಲ ಭವ್ಯ ಪರಂಪರೆ ಹೊಂದಿದ ದೇಶ ಭಾರತ. ಇಡೀ ಜಗತ್ತಿನ ಚರಿತ್ರೆಯನ್ನು ಪರಿಶೋಧಿಸಿ ನೋಡಿದರೆ ಮಹಿಳಾ ಸ್ಥಾನಮಾನದಲ್ಲಿ ಬದಲಾವಣೆಗಳೇ ಕಾಣಸಿಗುವುದಿಲ್ಲ. ಸಂದ ಸ್ಥಾನಮಾನ ತೀರ ಅತ್ಯಲ್ಪ. ಸಮಾಜದಲ್ಲಿ ಮಹಿಳೆ ವ್ಯಕ್ತಿಯಾಗಿ ಪರಿಗಣಿತವಾಗಲೇ ಇಲ್ಲ, ಪುರುಷ ಪ್ರಧಾನ ಅನುಷಂಗಿಕ ವ್ಯವಸ್ಥೆಯಲ್ಲಿ ಅವಗಣನೆಗೆ ಗುರಿಯಾಗಿದ್ದಾಳೆ. ಅವಳ ಮೌಲ್ಯಾದರ್ಶಗಳಿಗೆ ಯಾವ ನೆಲೆಯೂ ಸಿಗದೆ ಆಕೆ ಪ್ರಾರಂಭ ಕಾಲದಿಂದಲೂ ತನ್ನ ‘ಅಸ್ಮಿತೆ’ಗಾಗಿ ಹೋರಾಟ ಮಾಡುತ್ತಲೇ ಬಂದಿದ್ದಾಳೆ. ಆಕೆಯ ಈ ಹೋರಾಟ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದರೆ ಮೊದಲು ತನ್ನ ಕುಟುಂಬದಿಂದಲೇ, ಬರೀ ಕುಟುಂಬ ನಿರ್ವಹಣೆ, ಲಾಲನೆ, ಪಾಲನೆ, ಪೋಷಣೆ, ಸಂತಾನೋತ್ಪತ್ತಿ, ಮುಂತಾದ ಸಾಮಾಜಿಕ ನೆಲೆಗಳಲ್ಲಿ ಮಾತ್ರವೇ ಅವಳನ್ನು ಗುರುತಿಸಲಾಗುತ್ತದೆ.

ಸ್ತ್ರೀ ಸಂಬಂಧ ಮೌಲ್ಯಗಳು (ಹೇರಲಾದ ಗುಣಗಳು) ನಯ, ವಿನಯ, ನಿಸ್ವಾರ್ಥ, ತಾಳ್ಮೆ, ಕ್ಷಮೆ, ಸೇವೆ, ಶೀಲ, ಸಂಯಮ, ಪಾತಿವ್ರತ್ಯ, ತಾಯ್ತನ ಮುಂತಾದ ಗುಣಗಳನ್ನು ಆಕೆಯಲ್ಲಿ ಕಾಣಲೇಬೇಕೆನ್ನುವ ಸಂಪ್ರದಾಯವಾದಿಗಳು ಅವಳ ಮೇಲೆ ಎಷ್ಟೇ ಒತ್ತಡ, ಅತ್ಯಾಚಾರ, ಅನಾಚಾರಗಳಾದರೂ, ಸಹಿಸಿಕೊಂಡು ಬೆಳೆಯುವ ಪರಿಪಾಠದಲ್ಲಿ ಬೆಳೆಸಿದ್ದಾರೆ. ಮಹಿಳೆಯ ‘‘ಅಸ್ಮಿತೆಗೆ’’, ಅವಳ ಭಾವನೆಗಳಿಗೆ ಕೊಂಚವೂ ಬೆಲೆ ನೀಡಿಲ್ಲ. ಅದಕ್ಕಾಗಿ ಅವಳನ್ನು ಕ್ಷಮೆಯಾಧರಿತ್ರಿ, ಸತಿ, ಸಹನಾಶೀಲಳು ಎಂದೆಲ್ಲ ಪದಗಳಿಂದ ಕರೆದು ಪುರಸ್ಕರಿಸಲಾಯಿತು.

ಇಂದು ಹಲವಾರು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು ಅನೇಕ ಸಾಧನೆಗಳನ್ನು ಮಾಡಿದ ಮಹಿಳೆ ತನಗೆ ಹಾಕಿದ ಪರಿಧಿ ದಾಟಿ ಅಡುಗೆ ಮನೆಯಿಂದ ಅಂತರಿಕ್ಷದ ಕಡೆಗೆ ಹಾರಿದರೂ, ಸಾಮಾಜಿಕ ಸ್ವರದಲ್ಲಿ ಆಕೆಗೆ ಯಾವ ಬೆಲೆ ಇಲ್ಲ. ನೈತಿಕ ತಳಹದಿಯು ಶಿಥಿಲಗೊಂಡು ನಮ್ಮ ಸಂಸ್ಕೃತಿ ಮಣ್ಣುಪಾಲಾಗಿದೆ. ಮಹಿಳೆಗಿಂದು ಯಾವ ಕ್ಷೇತ್ರದಲ್ಲಿಯೂ ಸುರಕ್ಷತೆ ಇಲ್ಲದಂತಾಗಿದೆ. ಪ್ರಾಚೀನ ಕಾಲದಿಂದಲೂ ಗತಿ, ವಿಗತಿಗಳ ಪಾಥೇಯ ಹೊತ್ತು ತನ್ನ ಅಸ್ಮಿತೆಗಾಗಿ ಸಂಘರ್ಷ ಮಾಡಲೇ ಬೇಕಾದ ಅನಿವಾರ್ಯತೆ ಉಂಟಾಗಿದೆ. ಇಂದು ಲಿಂಗ ತಾರತಮ್ಯ ಹಾಸುಹೊಕ್ಕಾಗಿ ಅದರ ನಂಬಿಕೆ ಸಾಂಸ್ಥಿಕ ಮೌಲ್ಯಗಳು ಬದಲಾಗಿರುವುದರಿಂದ ಸಾಮಾಜಿಕ ಸಮುದಾಯವನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಲಿಂಗಾಧಾರಿತ ಪೂರ್ವಗ್ರಹಗಳು ಮಹಿಳಾ ಅಭಿವೃದ್ಧಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿವೆ.

ಮಹಿಳೆಯನ್ನು ಪುರುಷರ ಆಸ್ತಿಯಂತೆ ಪರಿಗಣಿಸಲಾಗುತ್ತಿತ್ತು. ಅಲ್ಲದೆ ಪಶುವಿನಂತೆ ದಾನರೂಪದಲ್ಲಿ ಕೊಡುವ ಪದ್ಧತಿ ಇತ್ತು. ಲೈಂಗಿಕ ಶೋಷಣೆ ಮಾಡುವ ಪದ್ಧತಿಯೂ ಇತ್ತು. ಯಜ್ಞಮಂಟಪದಲ್ಲಿ ಹುಟ್ಟಿದವರಿಗೆ "ಅಯೋನಿಜ" ಎಂದು ಕರೆಯಲಾಗುತ್ತಿತ್ತು. ಹೆಣ್ಣನ್ನು ಯಜ್ಞ ಮಂಟಪದಲ್ಲಿಯೇ ಯಜ್ಞಕ್ಕೆ ಬಂದವರು ಸಮ್ಮುಖದಲ್ಲಿ ಲೈಂಗಿಕ ಕ್ರಿಯೆ ನಡೆಸುತ್ತಿದ್ದುದರ ಉಲ್ಲೇಖ ಲಭ್ಯವಾಗುತ್ತದೆ. ಪತ್ನಿಯರನ್ನು ಬಾಡಿಗೆಗೆ ಕೊಡುವ ಪದ್ಧತಿ ಇತ್ತು. ಅವರನ್ನು ಬಾರಿಕ ಎಂಬ ಪದದಿಂದ ಕರೆಯಲಾಗುತ್ತಿತ್ತು. ಇಂದು ಬಾಡ್ಯಾ ಎಂಬ (ಮರಾಠಿ ಬೈಗುಳ) ಪದ ಇದರಿಂದಲೇ ಹುಟ್ಟಿಕೊಂಡಿದ್ದು.

**ಐತಿಹಾಸಿಕತೆ:**

ಮಹಿಳೆಗೆ ಪ್ರಾಚೀನ ಕಾಲದಲ್ಲಿ ಮುಕ್ತ ಅವಕಾಶವಿತ್ತು ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ಕುಲದ ಸಾಂಸ್ಥಿಕ ಪ್ರಶ್ನೆಗಳೇ ಅಲ್ಲಿ ಹೆಚ್ಚಾಗುತ್ತವೆ. "ಯತ್ರ ನಾರಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ:" ಅದು ಇಲ್ಲಿ ಕೇವಲ ತೋರಿಕೆಗೆ ಎಂಬುದು ಸತ್ಯ.

ಚಾರಿತ್ರಿಕ ಕಾಲಘಟ್ಟದಲ್ಲಿ ನೋಡಿದಾಗ ಎಲ್ಲಿಯೂ ಮಹಿಳೆಗೆ ಸುರಕ್ಷತೆಯೇ ಇರಲಿಲ್ಲ. ನಮ್ಮ ದೇಶದಲ್ಲಿ ಮಹಿಳೆಯರಿಗೆ ಅತ್ಯುತ್ತಮ ಸ್ಥಾನ ಒದಗಿಸಲಾಗಿತ್ತು ಸಮರ್ಥನೆಗಾಗಿ ಗಾರ್ಗಿ, ಮೈತ್ರೇಯಿ, ಅಪಾಲಾ, ವಿಶ್ವವಾರಾ, ಘೋಷಾ, ನಿಖಿತಾವಾಸಿನಿ, ವಿದುಷಿಯರಾಗಿದ್ದರು ಎಂದು ಉಲ್ಲೇಖಿಸುತ್ತಾರೆ. ಇಷ್ಟು ಆಧಾರಗಳಿಂದ ಇಡೀ ವೈದಿಕ ಸಮುದಾಯದ ಒಟ್ಟು ಮಹಿಳಾ ಲೋಕವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೂ ಅಲ್ಲ. ಸಾಧುವೂ ಅಲ್ಲ. ಈ ಮಹಿಳಾ ಮಣಿಗಳು ತಮಗೆ ಸಿಕ್ಕ ಪರಿಸರದ ಕಾರಣ ವಿದ್ಯೆ ಪಡೆದು ವಿದೂಷಿಯರಾಗಿರಬಹುದು.

ಮನು ಎಂಬ ಸ್ಮೃತಿಕಾರನು ಬಹಿರಂಗವಾಗಿಯೇ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳೇ ಅಲ್ಲ ಎಂದು ಹೇಳಿದ ಮಹಾಶಯ.

**ಮಹಿಳೆಯರ ಬಗೆಗೆ ಅತ್ಯಂತ ಕೀಳುರಿಮೆ ಹೊಂದಿದ್ದ. ಆತ ತನ್ನ ಸ್ಮೃತಿಯ 9ನೇ ಅಧ್ಯಾಯದಲ್ಲಿ:**

1. ಸ್ತ್ರೀ ಮೋಹಗೊಳಿಸುವವಳು, ಚಂಚಲ ಸ್ವಭಾವದವಳು.
2. ವಿಧವೆಯಾದ ಹೆಣ್ಣಿನ ಜೊತೆಗೆ ಒಂಟಿಯಾಗಿರಬಾರದು.
3. ತಾಯಿ, ಸೋದರಿ, ಮಗಳ ಜೊತೆಗೆ ಗಂಡಸು ಒಂಟಿಯಾಗಿರಬಾರದು.
4. ಸ್ತ್ರೀಯು ಕಾಮುಕಳು, ಹೃದಯಹೀನಳಾದ ಆಕೆ ತನ್ನ ಗಂಡಂದಿರ ಮೇಲೆ ನಿಷ್ಠೆಯಿಲ್ಲದವರಾಗುತ್ತಾಳೆ.
5. ಮಹಿಳೆಯು ಅಲಂಕಾರಗಳಲ್ಲಿ ವಿಪರೀತ ಪ್ರೀತಿ ಹೊಂದಿರುತ್ತಾಳೆ.

6. ಕಾಮ, ಕ್ರೋಧ, ಕಪಟ, ದುರ್ವರ್ತನೆ, ಮನೋವಿಕಾರ ಮುಂತಾದ ಸ್ವಭಾವಗಳು ಸ್ತ್ರೀಯರ ಜನ್ಮಸಿದ್ಧ ಹಕ್ಕುಗಳು.
7. ಮಹಿಳೆ ಸದಾ ಪುರುಷನ (ತಂದೆ, ಗಂಡ, ಪುತ್ರ) ಆಧೀನವಾಗಿರಬೇಕೆಂದು ಹೇಳುತ್ತಾನೆ.
8. ಆಕೆಯ ಪ್ರಕೃತಿ ಸಹಜ ಕ್ರಿಯೆಗಳನ್ನು ಸೂತಕ, ಅನಿಷ್ಟಗಳೆಂದು ಪರಿಗಣಿಸಿ ವೇದಾಧ್ಯಯನಗಳಿಂದ ದೂರವೇ ಇರಬೇಕೆಂದು ಹೇಳಿದ.
9. ಮಹಿಳೆ ಅಶುಭಳೆಂದು ಪರಿಗಣಿಸಿ ವಿವಾಹ ಒಂದನ್ನು ಹೊರತುಪಡಿಸಿ ಷೋಡಶ ಸಂಸ್ಕಾರಗಳಿಗೆ ಆಕೆ ಅನರ್ಹ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.
10. 'ಸತೀಂ ಶುಕೃಷ್ಯತೇ ಏನೇತೇನ ಸ್ವರ್ಗೇ ಮಹಿಯತೇ'. (ಪತಿಯ ಸೇವೆಯಿಂದ ಸ್ವರ್ಗಪ್ರಾಪ್ತಿ).
11. ಸೇವೆಗೆ ಮಾತ್ರ ಆಕೆ ಇರಬೇಕು, ಅದಕ್ಕೆ ಆಕೆ ವಿವಾಹವಾಗಬೇಕು ಎನ್ನುತ್ತಾನೆ. ಸೇವೆ ಆಕೆಯ ಹಣೆಯಲ್ಲಿ ಬರೆದು ಕಳಿಸಿದ್ದಾನೆ.
12. ಮಹಿಳೆಯನ್ನು ಕೆಲಸದಾಳಿನಂತೆ ಉಪಯೋಗಿಸಬೇಕೆಂದು ಸಾರಿ ಸಾರಿ ಹೇಳುವ ಮನು ಆಕೆಯ ಸಂರಕ್ಷಣೆಯ ಒಂದು ಮಾತೂ ಹೇಳಿರುವುದಿಲ್ಲ. ಅಂದಾಗ ಸ್ಮೃತಿಕಾರರ ಕಾಲದಲ್ಲಿ ಹೆಣ್ಣಿಗೆ ಸುರಕ್ಷತೆ ಇರುವುದಿಲ್ಲವೆನ್ನುವುದು ಸತ್ಯವಾದ ಸಂಗತಿ.

ಸ್ಮೃತಿಕಾರ ಯಾಜ್ಞವಲ್ಕ್ಯ ಕೂಡಾ ಬ್ರಹ್ಮವಿದ್ಯೆಯ ಪ್ರಸ್ತುತಿಯ ಸಂದರ್ಭದಲ್ಲಿ ತನ್ನ ಪತ್ನಿ ಗಾರ್ಗಿಯು ತನ್ನಷ್ಟೇ ಪಾಂಡಿತ್ಯ ಪಡೆದಿದ್ದರೂ, ರಾಜಧರ್ಮ ಸಭೆಯಲ್ಲಿ ಆಕೆ ಪ್ರಶ್ನೆ ಕೇಳಿದಾಗ ನೀನು ಹೆಣ್ಣು ಪ್ರಶ್ನೆ ಕೇಳಬಾರದು ಎಂದು ತಲೆ ಬಡಿದು ಕೂಡಿಸುತ್ತಾನೆ. ಇದು ಪತಿಯ ದೌರ್ಜನ್ಯವಲ್ಲದೆ ಮತ್ತೇನು?

ಇನ್ನು ಲೋಪಮುದ್ರೆಯೂ ವಿದ್ವಾಂಸಳಾಗಿದ್ದರೂ ಸದಾ ತನ್ನ ಪತಿ ಅಗಸ್ಯನ ಜಟೆಯಲ್ಲೇ ಇದ್ದು ಜೀವನ ಕಳೆಯಬೇಕಾಗಿತ್ತು. ಅಗಸ್ತ್ಯ ದಕ್ಷಿಣದ ಕಡೆಗೆ ಬಂದಾಗ ತಲಕಾವೇರಿಯ ಸರೋವರದಲ್ಲಿ ಹೂ ಕೀಳಲು ಹೋಗಿ ಕರ್ನಾಟಕದ ಜೀವನದಿ ಕಾವೇರಿಯಾಗಿ ಹರಿದಿದ್ದು ಒಂದು ರೋಚಕ ಕಥೆಯಾದರೂ ಇಲ್ಲಿ ಅಗಸ್ತ್ಯ ಯಾಕೆ ಅವಳನ್ನು ಜಡೆಯಲ್ಲಿಟ್ಟುಕೊಂಡು ಓಡಾಡುತ್ತಿದ್ದ?.

ಮಹಾಭಾರತದಲ್ಲಿ ದೌಪದಿ ಐದು ಜನ ಗಂಡಂದಿರನ್ನು ಹೊಂದಿದ್ದು, ಆಕೆ ಐವರನ್ನು ವರಿಸಲೇಬೇಕಾದ ಅನಿವಾರ್ಯತೆ ಒದಗಿ ಬಂದಿದ್ದು ಮಹಿಳಾ ಅಭಿವ್ಯಕ್ತಿಗೆ ಸ್ವಾತಂತ್ರ್ಯವಿಲ್ಲದ್ದು ಸ್ಪಷ್ಟ. ರಾಜಸಭೆಯಲ್ಲಿ ಪಗಡೆಯಾಟದಲ್ಲಿ ಸೋತ ಪಾಂಡವರು ತಮ್ಮದೇ ಪತ್ನಿಯನ್ನು ಕೂದಲು ಹಿಡಿದು ಎಳೆದು ತಂದು ವಿದುರ, ಭೀಷ್ಮ, ಧೃತರಾಷ್ಟ್ರ ಎಲ್ಲರೆದುರೇ ಆಕೆಯ ಸೀರೆ ಸೆಳೆದು ಅವಮಾನಿಸಿದ್ದು ಅಸುರಕ್ಷತೆಗೆ ಒಂದು ಉದಾಹರಣೆ.

ರಾಮಾಯಣದಲ್ಲಿ ಸೀತೆಯು ಸ್ತ್ರೀತ್ವ, ಸಂಯಮಕ್ಕೆ ಹೆಸರಾದವಳು. ಸೀತೆಯ ಕಥೆಯೂ ಅಷ್ಟೇ. ದೇಶವಾಳುವ ಪ್ರಭುವಿನ ಮಡದಿಯಾಗಿದ್ದರೂ ಸುರಕ್ಷತೆ ಇರದೇ ರಾವಣನ ಬಂಧನ, ಅಗ್ನಿ ಪರೀಕ್ಷೆಯ ನಂತರವೂ ಕಾಡಿಗೆ ಅಟ್ಟಲಾದ ಪ್ರಸಂಗಗಳು

ಅಸುರಕ್ಷತೆಗೆ ಪ್ರತ್ಯಕ್ಷ ನಿದರ್ಶನಗಳು. ದೌಪದಿ, ಸೀತೆಯಂತಹವರದೇ ಇಂತಹ ಸ್ಥಿತಿ ಇರಬೇಕಾದರೆ ಇನ್ನು ಸಾಮಾನ್ಯ ಮಹಿಳೆಯರ ಪಾಡು ಏನಾಗಿರಬಹುದು ಊಹಿಸಲು ಅಸಾಧ್ಯ. ಮಹಿಳೆ ಇಲ್ಲಿ ಧೈರ್ಯ, ಸ್ಥೈರ್ಯದಿಂದ ಎದುರಿಸಿದನ್ನು ವೈಭವೀಕರಿಸುತ್ತಾರೆ. ವಿನಃ ಹಿಂದಿನ ನೋವು ಪಟ್ಟ ಪಾಡು ದಾಖಲಿಸುವುದಿಲ್ಲ.

**ಸತಿ ಪದ್ಧತಿ:**

ಸತಿ ಪದ್ಧತಿಯು ಇನ್ನೊಂದು ಅನಿಷ್ಟ ಪದ್ಧತಿ. ಅನಾಗರಿಕ ಸಮಾಜವು ವಿಧವೆಯರ ಕಗ್ಗೊಲೆಗೆ ನೀಡಿದ ನ್ಯಾಯ ಸಮ್ಮತ ಸಭ್ಯತೆಯ ಹೆಸರಿನ ಪದ್ಧತಿ. ಇದಕ್ಕೆ ಶಾಸ್ತ್ರಾಧಾರಗಳಿವೆ ಎಂದು ಧರ್ಮಗುರುಗಳು ಅದನ್ನೇ ತಪ್ಪಾಗಿ ಗ್ರಹಿಸಿ ತಪ್ಪಾಗಿ ಅರ್ಥೈಸಿಕೊಂಡಂತಿದೆ.

**ಇಯಂ ನಾರಿ ಪತಿಲೋಕ ವೃಣಾನಾ!**
**ನಿಷದ್ಯತ ಉಪತ್ಸಾ ಮರ್ತ್ಯಂ ಪ್ರೇತಂ!**
**ಧರ್ಮಂ ಪ್ರಣಮನು ಪಾಲಯಾಟ ತಸ್ಯ!**
**ಪ್ರಜಾ ದ್ರವಿಣಂ ಚಹದೇವಿ!**

ಇನ್ನೊಂದು ಶ್ಲೋಕದಲ್ಲಿ ನಿಯುಕ್ತ ಪುರುಷದ ಅರ್ಥವನ್ನು ಮೃತಪತಿ ಎಂದು ತಪ್ಪಾಗಿ ಅರ್ಥೈಸಿ ವಿಧವೆ ಹೆಣ್ಣು, ಗಂಡನ ಜೊತೆ ಪರಲೋಕಕ್ಕೆ ಹೋಗಲೇಬೇಕೆಂದು ವಾದಿಸುತ್ತಾರೆ. ಆದರೆ ಅಲ್ಲಿ ನಿಧನ ಹೊಂದಿದ ಪತಿಯ ಹೆಂಡತಿಗೆ ದ್ರವಿಣ (ಹಣ), ಪ್ರಜಾ (ಮಕ್ಕಳು) ಪ್ರಾಪ್ತವಾಗಲಿ ಎಂದಿದೆ. ವಿಧವೆಯು ತನ್ನ ಗಂಡನ ದೇಹ ಸಂಸ್ಕಾರದ ನಂತರ ನಿಯೋಗ ಪದ್ಧತಿಯ ಪ್ರಕಾರ ಸುಖಜೀವನ ನಡೆಸುವ ಅಧಿಕಾರವಿದೆ ಎಂದಿದೆ. ಸತಿಪದ್ಧತಿಯ ಸಮರ್ಥಕರು ಅದ್ರೇ ಎಂಬುದನ್ನು ಅಗ್ನಿ ಎಂದು ಅರ್ಥೈಸಿ ಸತಿಪದ್ಧತಿ ವೇದೋಕ್ತಿ ಎಂದು ಪ್ರತಿಪಾದಿಸಿದ್ದಾರೆ. ಎಲ್ಲಿತ್ತು ಸುರಕ್ಷತೆ ವೇದಗಳ ಕಾಲದಲ್ಲಾ? ಆಕೆ ಪತಿಯ ಆಸ್ತಿಗೆ ಹಕ್ಕುದಾರಳು ಎಂಬ ಕಾರಣಕ್ಕೆ ಬಲವಂತವಾಗಿ ಬೆಂಕಿಗೆ ಹಾಕಿದ ಘಟನೆಗಳು ಲಭ್ಯವಾಗುತ್ತವೆ. ವಿಧವೆಯನ್ನು "ಸತಿ" ಎಂಬ ಸಂಚಿನ ಮೂಲಕ ಸುಲಭವಾಗಿ ಕಗ್ಗೊಲೆಗೈಯಲು ಇದು ಸರಳ ವಿಧಾನ.

**ಸತಿ ಪದ್ಧತಿ ಎಲ್ಲೆಲ್ಲಿ ಹೇಗಿದ್ದವು:**

1. ಮ್ಯಾಕ್ಸ್ ಮುಲ್ಲರ್-ಶಾತವಾಹನರ ಕಾಲದಲ್ಲಿಯೇ ಇದು ಜಾರಿಯಲ್ಲಿತ್ತು ಎಂದಿದ್ದಾನೆ.
2. ಗ್ರೀಕ್ ಹೆರೋಡೋಟಸ್ ತನ್ನ ಕೃತಿ 'ದಿ ಹಿಸ್ಟೋರೀಸ್'ನಲ್ಲಿ ಅಮೆರಿಕೆಯ ರೆಡ್ ಇಂಡಿಯನ್ನರಲ್ಲಿ ಈ ಪದ್ಧತಿ ಇತ್ತು ಎಂದಿದ್ದಾನೆ.
3. ಕ್ಯಾಲಿಫೋರ್ನಿಯಾದ ಆಫ್ರಿಕನ್ ಮೂಲಬುಡಕಟ್ಟು ಜನಾಂಗಗಳಲ್ಲಿ ರಾಜ ಸತ್ತರೆ ಆತನ ಸಮಾಧಿಯ ಪಕ್ಕ ದೊಡ್ಡ ಗುಂಡಿಯನ್ನು ತೋಡಿ ರಾಣಿಯರ ಕಾಲು ಕತ್ತರಿಸಿ ಸಾಯಲು

ಬಿಡುತ್ತಿದ್ದರು.

4. ತುಫಾರಸ್ ಜನಾಂಗದಲ್ಲಿ ದೊರೆ ಸತ್ತರೆ ರಾಣಿಯನ್ನು ನೇಣು ಹಾಕುತ್ತಿದ್ದರು.
5. ಉಗಾಂಡದಲ್ಲಿ ರಾಜ ಸತ್ತರೆ ರಾಣಿಯನ್ನು ಕೈ ಕಾಲು ಕಟ್ಟಿ ಸಮಾಧಿಯ ಬಳಿ ಬಿಡುತ್ತಿದ್ದರು. ಆಕೆ ಹಸಿವಿನಿಂದ ಸಾಯುತ್ತಿದ್ದಳು.
6. ಕ್ರಿ.ಶ 510ರ ಶಾಸನದಲ್ಲಿ ಭಾನುಗುಪ್ತ ಯುದ್ಧದಲ್ಲಿ ಮರಣ ಹೊಂದಿದಾಗ ಆತನ ಸತಿ ಸಹಗಮನ ಮಾಡಿದ ಉಲ್ಲೇಖವಿದೆ.
7. ಈ ಅನಿಷ್ಟ ಪದ್ಧತಿ ಕಾನೂನು ಬಾಹಿರ ಎಂದು ಕ್ರಿ. ಶ. 1829 ವಿಲಿಯಂ ಬೆಂಟಿಂಕ್ ಘೋಷಿಸಿದ್ದರೂ ಈಗಲೂ ಉತ್ತರ ಭಾರತದಲ್ಲಿ ಆಚರಣೆಯಲ್ಲಿ ಇದೆ.
8. ಉತ್ತರ ಪ್ರದೇಶದಲ್ಲಿ ಇಂತಹ ಘಟನೆ ಸಾಕಷ್ಟು ಘಟಿಸಿವೆ. (27 ಸೆಪ್ಟೆಂಬರ್ 1823 ರಾಧಾಬಾಯಿ, 28 ನವೆಂಬರ್ 1927 ಪಾಟ್ನಾದಲ್ಲಿ ಸಿದ್ದೇಶ್ವರ ಪಾಂಡೆಯ ಜೊತೆಗೆ ಸಂಪತ್ ಕುಮಾರಿ, 4 ಸೆಪ್ಟೆಂಬರ್ 1987 ವಿಶಾಲ ರೂಪಾ ಕನ್ವರ್ ಮುಂತಾದವರು ಉದಾಹರಣೆ ಮಾತ್ರ.)

**ಹೆಣ್ಣು ಭ್ರೂಣ ಹತ್ಯೆ:**

ಈ ಅನಿಷ್ಟ ಪದ್ಧತಿಯು 18ನೇ ಶತಮಾನಕ್ಕಿಂತಲೂ ಮುಂಚೆಯೇ ಜಾರಿಯಲ್ಲಿತ್ತು. ಹೆಣ್ಣು ಶಿಶು ಹತ್ಯೆ ಜಾರಿಯಲ್ಲಿತ್ತು. ಹೆಣ್ಣು ಮಗು ಹುಟ್ಟಿದಾಕ್ಷಣವೇ ಕುತ್ತಿಗೆ ಹಿಸುಕಿ ಸಾಯಿಸುತ್ತಿದ್ದರು. ಇಂದು ಇನ್ನೂ ಆಘಾತಕಾರಿ ಸಂಗತಿ, ಏಕೆಂದರೆ ಹಿಂದೂ ಸಂಪ್ರದಾಯಸ್ಥ ಕುಟುಂಬಗಳು ಗಂಡು ಮಕ್ಕಳ ಆಕಾಂಕ್ಷಿಗಳಾಗಿದ್ದು ಭ್ರೂಣದಲ್ಲಿ ಹೆಣ್ಣು ಮಗುವನ್ನು ಕೊಂದು ಹಾಕುವ ಚಾಂಡಾಲರಾಗಿದ್ದಾರೆ. ಹೀಗಾಗಿ ಇಂದು ಗಂಡು ಹೆಣ್ಣಿನ ಅನುಪಾತದಲ್ಲಿ ಗಣನೀಯವಾಗಿ ಇಳಿತ ಕಂಡು ಬಂದಿದೆ.

| **1981ರಲ್ಲಿ** | **1991ರಲ್ಲಿ** | **2001ರಲ್ಲಿ** | **2011ರಲ್ಲಿ** |
|---|---|---|---|
| ಪುರುಷ–ಮಹಿಳೆ | ಪುರುಷ–ಮಹಿಳೆ | ಪುರುಷ–ಮಹಿಳೆ | ಪುರುಷ–ಮಹಿಳೆ |
| 50.64 – 49.36 | 50.69 – 49.29 | 51.29 – 48.71 | 51.11 – 48.40 |

**ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ:**

» ಉದ್ಯೋಗಸ್ಥ ಮಹಿಳೆ ಸ್ವತಂತ್ರಳು, ಆರ್ಥಿಕವಾಗಿ ಸದೃಢ ಎಂಬ ನಂಬಿಕೆ ಎಲ್ಲರಲ್ಲಿಯೂ ಇದೆ. ಆದರೆ ವಿಪರ್ಯಾಸದ ಸಂಗತಿಯೆಂದರೆ ಅವಳೇ ಅಷ್ಟು ಸುರಕ್ಷಿತಳಲ್ಲ. ತನ್ನ ಮೇಲಾಧಿಕಾರಿಯಿಂದಲೇ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾಳೆ.

**ಅತ್ಯಾಚಾರಗಳು:**

» ಬೆಂಗಳೂರು, ದೆಹಲಿ, ಮಧ್ಯಪ್ರದೇಶ, ಬಿಹಾರ, ಒರಿಸ್ಸಾ ಮುಂತಾದೆಡೆಗಳಲ್ಲಿ ಇತ್ತೀಚೆಗೆ ಬಹುವಾಗಿ ಚರ್ಚಿತ ಮತ್ತು ಸುದ್ದಿಯಲ್ಲಿರುವ ಸಂಗತಿ ಎಂದರೆ ಬಲಾತ್ಕಾರವೆಂಬ ಭೂತ.

» 3, 4, 5, 6, 7 ವರ್ಷಗಳ ಪುಟ್ಟ ಕಂದಮ್ಮಗಳ ಮೇಲೂ ಸಂಸ್ಕಾರಹೀನ ಪುರುಷರಿಂದ ಅತ್ಯಾಚಾರವಾಗುತ್ತಿರುವುದು ನಾಚಿಕೆಗೇಡು.

» ಮಲಾಲಾ, 23 ವರ್ಷದ ನಿರ್ಭಯಾಳನ್ನು ದೆಹಲಿಯಲ್ಲಿ ಚಲಿಸುವ ಬಸ್ಸೊಂದರಲ್ಲಿ 6 ಜನ ಬಲಾತ್ಕರಿಸಿದ್ದು ಇಡೀ ದೇಶವೇ ತಲ್ಲಣಗೊಂಡಿತ್ತು. ಆದರೆ ವಿಪರ್ಯಾಸದ ಸಂಗತಿ ಎಂದರೆ ತಮ್ಮ ಸ್ವಂತ ಮಕ್ಕಳು, ಸೋದರಿಯರು, 70 ವರ್ಷದ ವೃದ್ಧರೂ ಕೂಡಾ ಇಂದು ಸುರಕ್ಷಿತರಲ್ಲ.

» ಮಹಿಳೆಯರು ಒಂದಿಲ್ಲ ಒಂದು ರೀತಿ ಸಹೋದ್ಯೋಗಿಗಳಿಂದ ಕಿರುಕುಳಕ್ಕೆ ಗುರಿಯಾಗುತ್ತಲೇ ಇರುತ್ತಾಳೆ. ಲೈಂಗಿಕ ಕಿರುಕುಳ ಭಾರತದಂತಹ ದೇಶದಲ್ಲಿ ಇಂದು ಇತ್ತೀಚೆಗೆ ವಿಪರೀತವಾಗಿ ನಡೆಯುತ್ತಿರುವ ದೌರ್ಜನ್ಯವಾಗಿದೆ.

**ವರದಕ್ಷಿಣೆ:**

ನಿತ್ಯವೂ ಸಾವಿರಾರು ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಯಲ್ಲಿ ಸುಖವಾಗಿ ಬಾಳಲು ತೆರಳಿದ್ದವರು ಈ ಪಿಡುಗಿಗೆ ಬಲಿಯಾಗುತ್ತಿದ್ದಾರೆ. ಪ್ರತಿ ನಿಮಿಷಕ್ಕೊಂದು ವರದಕ್ಷಿಣೆ ಸಾವು ಸಂಭವಿಸುತ್ತಿದೆ. ಪ್ರತಿ 2 ನಿಮಿಷಕ್ಕೆ ಒಂದು ಬಲಾತ್ಕಾರವಾಗುತ್ತಿದೆ. ಹಾಗಾಗಿ ಯಾವ ಕ್ಷೇತ್ರದಲ್ಲಿಯೂ ಮಹಿಳೆಗೆ ಸುರಕ್ಷತೆಯೇ ಇಲ್ಲದಂತಾಗಿದೆ.

**ಪರಿಹಾರೋಪಾಯಗಳು:**

1. ಮಹಿಳೆಯರು ಸ್ವಪ್ರಜ್ಞೆ (ಮಲಾಲಾ ಅಂತಹ ಪುಟ್ಟ ಕಂದಮ್ಮಳಂತೆ) ಬೆಳೆಸಿಕೊಳ್ಳಬೇಕು.
2. ಸಶಕ್ತೀಕರಣದತ್ತ ಚಿತ್ತ ಹರಿಸಬೇಕು.
3. ಆತ್ಮ ವಿಶ್ವಾಸ ಬೆಳೆಸಿಕೊಳ್ಳಬೇಕು.
4. ಉತ್ತಮ ಶಿಕ್ಷಣ ಪಡೆಯಬೇಕು, ಸುಶಿಕ್ಷಿತಳಾಗಬೇಕು.
5. ಆತ್ಮ ಜಾಗೃತಿ ಹೊಂದಬೇಕು.
6. ಜ್ಞಾನ ಮತ್ತು ಕೌಶಲ್ಯ ಹೊಂದಬೇಕು.

7. ಅಭಿವ್ಯಕ್ತಿ ಸ್ವಾತಂತ್ರ್ಯ ತೋರಬೇಕು.
8. ಶಾರೀರಿಕವಾಗಿ ಶಕ್ತಿ ಹೆಚ್ಚಿಸಿಕೊಳ್ಳಬೇಕು.

**ಉಪಸಂಹಾರ:**

"ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯನ್ನು ಭೋಗದ ವಸ್ತುವಾಗಿ ನೋಡಲಾಗುತ್ತಿದೆ. ಆದರೆ ಆಕೆ ಸ್ತನದಲ್ಲಿ ಹಾಲಾಗಿ ಉಣಿಸಿದ್ದಾಳೆ. ಯೋನಿಯಲ್ಲಿ ಗರ್ಭವಾಗಿ ಹೊತ್ತಿದ್ದಾಳೆ. ತಾಯಿಯಾಗಿ, ತಂಗಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ಗೆಳತಿಯಾಗಿ, ಹೆಂಡತಿಯಾಗಿ ಜವಾಬ್ದಾರಿಯುತ ಕರ್ತವ್ಯ ನಿಭಾಯಿಸುವ ಶಕ್ತಿ ಇರುವುದು ಆಕೆಗೆ ಮಾತ್ರ.

ಹೆನ್ರಿ ಅವರ ಅಭಿಪ್ರಾಯದಂತೆ: "ಪ್ರಕೃತಿಯು ಮಹಿಳೆಗೆ ಅಗಾಧ ಶಕ್ತಿ ನೀಡಿದೆ, ಆದರೆ ಇತಿಹಾಸದಲ್ಲಿ ಅವಳ ಸ್ಥಾನ ತೀರ ಅತ್ಯಲ್ಪ" ಎಂದು.

ಆದರೆ ಪ್ರಾಚೀನ ಪರಿಸರ ಈಗಿಲ್ಲದಿದ್ದರೂ ಭಾರತ ದೇಶದಲ್ಲಿ ಎಷ್ಟೇ ಮಹಿಳಾ ಪರ ಕಾಯಿದೆಗಳನ್ನು ಜಾರಿಗೆ ತಂದರೂ ಆಕೆಗೆ ಸುರಕ್ಷತೆ ಇಲ್ಲ. ಮಹಿಳೆಯರ ಬಗೆಗಿನ ವ್ಯಕ್ತಿಗತ ದೃಷ್ಟಿಕೋನ ಬದಲಾಗಬೇಕಿದೆ. ಮಹಿಳೆಯರು ಗಟ್ಟಿಗರಾಗಿರಬೇಕಿದೆ. ಅವರು ತಮ್ಮ ಕಾರ್ಯಶಕ್ತಿ ಹೆಚ್ಚಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ಪಟ್ಟ ಶ್ರಮ ಸಾರ್ಥಕವಾದೀತು!

**ಪರಾಮರ್ಶನ ಗ್ರಂಥಗಳು:**


1. ಕೇಶವಶರ್ಮ, (2014), ಶ್ರೀ ಮತ್ತು ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
2. ಶ್ರೀಮತಿ ಹೆಚ್.ಎಸ್. (ಅನು), (2002), ಸಿಮೊನ್ ಡಿ ಬೊವಾ ದಿ ಸೆಕೆಂಡ್ ಸೆಕ್ಸ್, ಪಬ್ಲಿಷಿಂಗ್ ಹೌಸ್, ಬೆಂಗಳೂರು.
3. ಶ್ರೀಮತಿ ಹೆಚ್.ಎಸ್., (2001), ಸ್ತ್ರೀವಾದ ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
4. ರೊಮಿಲ್ಲಾ ಥಾಪರ್, (1978), ಪೊಸಿಷನ್ ಆಫ್ ವುಮೆನ್ ಇನ್ ಇಂಡಿಯನ್ ಸೊಸೈಟಿ, ನ್ಯೂ ದೆಹಲಿ.
5. ಜ್ಯೋತ್ಸ್ನಾ ಕಾಮತ್, (2001), ಕೈಗನ್ನಡಿಯಲಿ ಕನ್ನಡತಿ, ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು.
6. ಗಾಯತ್ರಿ ಎನ್., (1987), ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
7. ಚನ್ನಕ್ಕ ಎಲಿಗಾರ, (1990), ಶಾಸನಗಳಲ್ಲಿ ಸ್ತ್ರೀ ಸಮಾಜ, ಚೆನ್ನಗಂಗಾ ಪ್ರಕಾಶನ, ಧಾರವಾಡ.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.